ರಾಜ್ಯದಲ್ಲಿ ಪಶ್ಚಿಮ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಅರಣ್ಯ ಬೆಳೆಸುವುದು

4323(4985) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕಳೆದ ವರ್ಷ ಹಾಗೂ ಈ ವರ್ಷ ಪಶ್ಚಿಮ ಘಟ್ಟ ಯೋಜನೆಯಡಿಯಲ್ಲಿ ಅರಣ್ಯ ಬೆಳೆಸಲು ಎಷ್ಟು ಹಣವನ್ನು ಒದಗಿಸಲಾಗಿದೆ ಹಾಗೂ ಅದರಲ್ಲಿ ಎಷ್ಟು ಹಣ ಖರ್ಚಾಗಿದೆ ;

ಆ) ಬೆಳಗಾವಿ ಜಿಲ್ಲೆಯಲ್ಲಿ ಈ ಯೋಜನೆಯಡಿಯಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ : (ತಾಲ್ಲೂಕುವಾರು ವಿವರ ನೀಡುವುದು) ;

ಇ) ಬೆಳಗಾವಿ ಜಿಲ್ಲೆಯಲ್ಲಿ ಈ ಯೋಜನೆಯಡಿಯಲ್ಲಿ ಅರಣ್ಯ ಬೆಳೆಸಲು ಕಳೆದ ವರ್ಷ ಹಾಗೂ ಈ ವರ್ಷ ಎಷ್ಟು ಹಣ ಬಿಡುಗಡೆಯಾಗಿದೆ ಮತ್ತು ಎಷ್ಟು ಹಣ ಖರ್ಚಾಗಿದೆ ;

ಈ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಪಶ್ಚಿಮಘಟ್ಟ ಯೋಜನೆಯಡಿಯಲ್ಲಿ ಅರಣ್ಯ ಬೆಳೆಸಲು ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ ಹಾಗೂ ಈ ಕೆಲಸಕ್ಕೆ ಎಷ್ಟು ಹಣ ಖರ್ಚಾಗಿರುವುದು ?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) :

ಅ) ಜಿಲ್ಲಾ ವಲಯದ ಪಶ್ಚಿಮ ಘಟ್ಟ ಯೋಜನೆಯಡಿ 2002–03ನೇ ಸಾಲಿನಲ್ಲಿ 133.786 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿತ್ತು. ಅದರಲ್ಲಿ 118.577 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ 127.146 ಲಕ್ಷ ರೂ.ಗಳನ್ನು ಅನುದಾನದಲ್ಲಿ ಒದಗಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಈವರೆವಿಗೂ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಆ) ಜಿಲ್ಲಾ ವಲಯದ ಪಶ್ಚಿಮಘಟ್ಟ ಪ್ರದೇಶ ಅಭಿವೃದ್ಧಿ ಯೋಜನೆಯಡಿ ಬೆಳಗಾವಿ ಜಿಲ್ಲೆಯಲ್ಲಿ ಕೈಗೊಂಡ ಕಾಮಗಾರಿಗಳ ತಾಲ್ಲೂಕುವಾರು ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಇ) ಬೆಳಗಾವಿ ಜಿಲ್ಲೆಗೆ ಈ ಯೋಜನೆಯಡಿ ಕಳೆದ ವರ್ಷ (2002–03) 81.16 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿತ್ತು. ಅದರಲ್ಲಿ 79.00 ಲಕ್ಷ ರೂ. ಖರ್ಚಾಗಿದೆ. ಪ್ರಸಕ್ತ ಸಾಲಿನಲ್ಲಿ ಈ ಯೋಜನೆಗೆ ನಿಗದಿಪಡಿಸಿದ ಅನುದಾನ 59.166 ಲಕ್ಷ ರೂ.ಗಳು. ಈವರೆವಿಗೂ ಅನುದಾನ ಬಿಡುಗಡೆಯಾಗದಿರುವುದರಿಂದ ಖರ್ಚು ಭರಿಸಿರುವುದಿಲ್ಲ.

ಈ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಪಶ್ಚಿಮಘಟ್ಟ ಯೋಜನೆಯಡಿ 2002–03ನೇ ಸಾಲಿನಲ್ಲಿ ಕೈಗೊಂಡ ಅರಣ್ಯೀಕರಣ ಕಾಮಗಾರಿಗಳು ಹಾಗೂ ಭರಿಸಿದ ಖರ್ಚು ಈ ಕೆಳಕಂಡಂತಿದೆ.

ಕಾಮಗಾರಿ	ವಿವರ	ರೂ. ಲಕ್ಷಗಳಲ್ಲಿ
ನೆಡುತೋಪು ನಿರ್ಮಾಣ	163 ಹೆ.	0.540
ನೆಡುತೋಪು ನಿರ್ವಹಣೆ	463 ಹೆ.	10.989
ಸಸಿ ಬೆಳೆಸುವುದು	0.52 ಲಕ್ಷ	0.740
ಸಸಿ ನಿರ್ವಹಣೆ	1.90 ಲಕ್ಷ	1.240
ಬಿದಿರು ಮಡಿಗಳ ಉಸ್ತುವಾರಿ	800 ಸಂಖ್ಯೆ	
ಒಟ್ಟು		18.360

ಅನುಬಂಧ – 1

ಪಶ್ಚಿಮಘಟ್ಟ ಪ್ರದೇಶ ಅಭಿವೃದ್ಧಿ ಯೋಜನೆಯಡಿ ಬೆಳಗಾವಿ ಜಿಲ್ಲೆಯಲ್ಲಿ ಕೈಗೊಂಡ ತಾಲ್ಲೂಕುವಾರು ಕಾಮಗಾರಿಗಳ ವಿವರ

ತಾಲ್ಲೂಕು	ನೆಡುತೋಪು ನಿರ್ಮಾಣ (ಹೆಕ್ಟೇಡ್‌ಗಳಲ್ಲಿ)	ನೆಡುತೋಪು ನಿರ್ವಹಣೆ (ಹೆಕ್ಟೇಡ್‌ಗಳಲ್ಲಿ)	ಸಸಿ ಬೆಳೆಸುವುದು (ಲಕ್ಷಗಳಲ್ಲಿ)	ಸಸಿಗಳ ನಿರ್ವಹಣೆ (ಲಕ್ಷಗಳಲ್ಲಿ)	ಬಾಂಬು ಮಡಿಗಳ ಉಸ್ತುವಾರಿ (ಸಂಖ್ಯೆಗಳಲ್ಲಿ)
ಬೈಲಹೊಂಗಲ	163	420	0.52	1.9	800
ಬೆಳಗಾವಿ	30	189	–	0.195	40
ಖಾನಾಪುರ	311	550	–	1.59	460
ಹುಕ್ಕೇರಿ	–	120	–	–	–
ಸವದತ್ತಿ	–	43	–	–	–
ಒಟ್ಟು	504	1322	0.52	3.685	1300

ಬೈಲಹೊಂಗಲ ನಗರದಲ್ಲಿ ಕಟ್ಟುತ್ತಿರುವ ಕ್ರೀಡಾಂಗಣ ಕೆಲಸವನ್ನು ಪೂರ್ಣಗೊಳಿಸುವುದು

4324(4986) ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) : ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಜನರಿಗೆ ಉದ್ಯೋಗ ಕೊಡುವ ದೃಷ್ಟಿಯಿಂದ ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಕಟ್ಟುತ್ತಿರುವ ಕ್ರೀಡಾಂಗಣದ ಕೆಲಸವನ್ನು "ಕೂಲಿಗಾಗಿ ಕಾಳು" ಯೋಜನೆಯಡಿಯಲ್ಲಿ ತೆಗೆದುಕೊಂಡು ಅರ್ಧಕ್ಕೆ ನಿಂತಿರುವ ಕೆಲಸವನ್ನು ಪೂರ್ಣ ಮುಗಿಸಲು ಬೆಳಗಾವಿ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಲಾಗುವುದೇ ?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) :

ಅ) ಸಂಪೂರ್ಣ ಗ್ರಾಮೀಣ ರೋಜಗಾರ್ ಯೋಜನೆಯ ವಿಶೇಷ ಘಟಕದಡಿಯಲ್ಲಿ ಬಿಡುಗಡೆಯಾಗುವ ಆಹಾರ ಧಾನ್ಯವನ್ನು ಬಳಸುವ ಸಂದರ್ಭದಲ್ಲಿ ಕೆಳಕಂಡಂತೆ ಅದ್ಯತೆಯ ಮೇರೆಗೆ ಕಾಮಗಾರಿಗಳನ್ನು ನಿರ್ವಹಿಸುವಂತೆ ಆದೇಶಿಸಲಾಗಿದೆ.

1. ಪ್ರಥಮ ಅದ್ಯತೆ	ಜನಸಂರಕ್ಷಣೆ ಮತ್ತು ಜಲನಯನ ಅಭಿವೃದ್ಧಿ ಕಾಮಗಾರಿ
2. ದ್ವಿತೀಯ ಅದ್ಯತೆ	ಭೂಸಾರ ಸಂರಕ್ಷಣೆ
3. ತೃತೀಯ ಅದ್ಯತೆ	ಆಸ್ತಿ ನಿರ್ಮಾಣ
4. ಕೊನೆಯ ಅದ್ಯತೆ	ರಸ್ತೆ ಅಭಿವೃದ್ಧಿ ಕಾಮಗಾರಿಗಳು

ಕ್ರೀಡಾಂಗಣ ಕೆಲಸವು ಮೇಲ್ಕಂಡಂತೆ ಆದ್ಯತೆಯನುಸಾರ ಇರುವುದಿಲ್ಲ ಹಾಗೂ ಈ ಕ್ರೀಡಾಂಗಣ ಕೆಲಸವನ್ನು ಎಸ್ ಜಿ ಆರ್‌ವೈ ವಿಶೇಷ ಘಟಕದಡಿಯಲ್ಲಿ ಆಹಾರಧಾನ್ಯಗಳನ್ನು ಬಳಸಿಕೊಂಡು ತೆಗೆದುಕೊಂಡಿರುವುದಿಲ್ಲ.